(50)

# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ನಂ.ಕಂ.ಪಹಣಿ:ಅಪೀಲು:33/2015-16 ದಿನಾಂಕ:07.04.2016.

**ಉಪಸ್ಥಿತರು: ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**

**ಸಹಾಯಕ ಆಯುಕ್ತರು, ಹೊಸಪೇಟೆ**

*****

**ವಾದಿಗಳು: ಶ್ರೀ/ ಶ್ರೀಮತಿ**

1. ಎನ್.ಎಂ.ಸೌಭಾಗ್ಯ @ ಎಂ.ಜಯಶ್ರೀ ಗಂಡ ದಿ॥ ಎಂ.ಚಂದ್ರಶೇಖರಯ್ಯ
ವಾಸ: ಎನ್.ಎಂ.ಕೊಟ್ರಯ್ಯ, ನಿವೃತ್ತ ಗ್ರಾ.ಲೆ, ಶ್ರೀ ಮಲ್ಲಿಕಾರ್ಜುನ ಗುಡಿ ಹತ್ತಿರ, ಸತ್ಯನಾರಾಯಣ ಪೇಟೆ, ಕಂಪ್ಲಿ, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

[ **ಶ್ರೀ ಜಾಯ್ಸ್ ಪ್ರಹ್ಲಾದ್, ವಕೀಲರು, ಬಳ್ಳಾರಿ** ]

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1. ಎಂ.ಶಾರದಮ್ಮ ಗಂಡ ಎಂ.ವೀರಯ್ಯ,
ವಾಸ: ಡೋರ್.ನಂ.2087, ವಾರ್ಡ್ ನಂ.22, ಸಾಯಿ ಕಾಲೋನಿ, ಎಂ.ಪಿ.ಪ್ರಕಾಶ್ ನಗರ ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.
**[ಪ್ರತಿವಾದಿ-1 ರ ಪರ ವಕೀಲರು ಶ್ರೀ ಎ.ವಿರುಪಾಕ್ಷ ರೆಡ್ಡಿ, ವಕೀಲರು, ಹೊಸಪೇಟೆ]**
2. ತಹಶೀಲ್ದಾರರು, ಹೊಸಪೇಟೆ.
3. ಕಂದಾಯ ನಿರೀಕ್ಷಕರು, ಕಮಲಾಪುರ,
4. ಗ್ರಾಮಲೆಕ್ಕಾಧೀಕಾರಿ, ಹಂಪಿ.

**ವ್ಯಾಜ್ಯದ ಜಮೀನು:**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹೊಸಪೇಟೆ | ಕಮಲಾಪುರ | ಹಂಪಿ | 69/2ಎ | 01 ಎಕರೆ 71 ಸೆಂಟ್ಸ್ |

**ಪೀಠಿಕೆ:-**

ಹೊಸಪೇಟೆ ತಾಲೂಕು ಕಮಲಾಪುರ ಹೋಬಳಿ ಹಂಪಿ ಗ್ರಾಮದ ಸ.ನಂ.69/2ಎ ವಿಸ್ತೀರ್ಣ: 01 ಎಕರೆ 71 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಹೊಸಪೇಟೆ ಇವರ ನ್ಯಾಯಾಲಯದ ಆದೇಶ ಸಂಖ್ಯೆ: ಸಂಖ್ಯೆ/ಕಂ/ಪಹಣಿ/ತಕರಾರು/57/2014-15 ದಿನಾಂಕ:13.04.2015 ಅನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136[2] ರಡಿಯಲ್ಲಿ ದಿನಾಂಕ:10.06.2015 ರಂದು ಅಪೀಲುದಾರರ ಪರ ವಕೀಲರು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ವಾದಿಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:25.06.2015 ಕ್ಕೆ ನಿಗಧಿಪಡಿಸಿ ಉಭಯ ಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

**ವಾದಿಪರ ವಕೀಲರು ಈ ಕೆಳಗಿನಂತೆ ತಮ್ಮ ಲಿಖೀತ ವಾದ ಮಂಡಿಸಿರುತ್ತಾರೆ.**

1. ಸದರಿ ವ್ಯಾಜ್ಯದ ಜಮೀನು ವಾದಿಯ ಪತಿಯಾದ ಶ್ರೀ ಎಂ.ಚಂದ್ರಶೇಖರಯ್ಯ ತಂದೆ ಎಂ.ವೀರಯ್ಯ ಇವರ ಹೆಸರಿಗೆ ಇರುತ್ತದೆಂದು, ವಾದಿಯ ಪತಿಯು ದಿನಾಂಕ:12.09.2013 ರಂದು ಮರಣ ಹೊಂದಿದ್ದು ಈ ಬಗ್ಗೆ ಮರಣ ಪ್ರಮಾಣ ಪತ್ರ ಲಗತ್ತಿಸಿರುತ್ತಾರೆ.

2. ವಾದಿಯ ಪತಿಯು ತಮ್ಮ ಸ್ವಯಾರ್ಜಿತ ಆದಾಯದಿಂದ, ಸದರಿ ವ್ಯಾಜ್ಯದ ಜಮೀನನ್ನು ನೋಂದಾಯಿತ ದಸ್ತಾವೇಜು ಸಂಖ್ಯೆ: 320/2006-07 ದಿನಾಂಕ:21.04.2006 ರಂದು ಕ್ರಯಕ್ಕೆ ಪಡೆದಿರುವುದಾಗಿ ಆ ಪ್ರಕಾರವಾಗಿ ಹಕ್ಕು ಬದಲಾವಣೆ ಆದೇಶ ಸಂಖ್ಯೆ: ಎಂ.ಆರ್.ನಂ.: 26/2005-06 ದಿನಾಂಕ:20.06.2006 ರ ಪ್ರಕಾರ ವಾದಿಯ ಹೆಸರಿಗೆ ವರ್ಗಾವಣೆ ಆಗಿರುತ್ತದೆ.

3. ಕ್ರಯಕ್ಕೆ ಪಡೆದ ದಿನದಿಂದಲೂ ವಾದಿಯ ಪತಿಯೇ ಸದರಿ ಜಮೀನಿನ ಹಕ್ಕು ಮತ್ತು ಸ್ವಾಧೀನಾನುಭವವನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ. ಆದರೆ ದಿನಾಂಕ:12.09.2013 ರಂದು ವಾದಿಯ ಪತಿಯು ಮರಣ ಹೊಂದಿದ್ದು, ವಾದಿಯು ತನ್ನ ಹೆಸರಿಗೆ ಹಕ್ಕು ಬದಲಾವಣೆಗಾಗಿ ಅರ್ಜಿ ಸಲ್ಲಿಸಲಾಗಿ, ಸದರಿ ಹಕ್ಕು ಬದಲಾವಣೆಗೆ ವಾದಿಯ ಅತ್ತೆ (ಶ್ರೀ ಎಂ.ಚಂದ್ರಶೇಖರಯ್ಯ ಇವರ ತಾಯಿ) ಇವರು ತಕರಾರು/ ಆಕ್ಷೇಪಣೆ ಸಲ್ಲಿಸಿರುತ್ತಾರೆ. ಕಾರಣ ಈ ಬಗ್ಗೆ ಪ್ರತಿವಾದಿ-2 ರವರಾದ ತಹಶೀಲ್ದಾರರು, ಹೊಸಪೇಟೆ ಇವರಲ್ಲಿ ವಿವಾದಾಸ್ಪದ ಪ್ರಕರಣವೆಂದು ದಾಖಲಾಗಿರುತ್ತದೆ. ಪ್ರತಿವಾದಿ-1 ರವರು ದಿನಾಂಕ:05.04.2006 ರಂದು ವಿಕ್ರಯದಾರರಾದ ಶ್ರೀಮತಿ ಗಾಳೆಮ್ಮ ಇವರೊಂದಿಗೆ ಸದರಿ ಜಮೀನಿನ ಮೇಲೆ ಸ್ಥಿರಾಸ್ತಿ ಜಮೀನು ಕ್ರಯ ಕರಾರು ಮಾಡಿಕೊಂಡಿರುವುದಾಗಿ, ಇದರ ಪ್ರಕಾರ ಸದರಿ ವ್ಯಾಜ್ಯದ ಜಮೀನನ್ನು ರೂ.3,20,000/- ಗಳಿಗೆ ಖಂಡಿತ ಕ್ರಯಕ್ಕೆ ನೀಡಿರುವುದಾಗಿ, 2003 ರಲ್ಲಿ ರೂ.1,50,000/- ಗಳಿಗೆ ರೂ.2 ರ ಪ್ರಕಾರ ಬಡ್ಡಿ ಹಾಗೂ ರೂ.8,000/- ಗಳಿಗೆ ಒಂದು ವರ್ಷಕ್ಕೆ ಗುತ್ತಿಗೆ ಪಾವತಿಸುತ್ತಿರುವುದಾಗಿ, ಪ್ರತಿವಾದಿ-1 ರವರ ಹೆಸರಿಗೆ ಜಮೀನು ಇಲ್ಲದ ಕಾರಣ ಇವರ ಕೋರಿಕೆಯ ಮೇರೆಗೆ ಇವರ ಮಗ ಶ್ರೀ ಎಂ.ಚಂದ್ರಶೇಖರ ಇವರ ಹೆಸರಿನಲ್ಲಿ ಜಮೀನು ಇರುವುದರಿಂದ ಇವರ ಹೆಸರಿಗೆ ರಿಜಿಸ್ಟರ್ ಮಾಡಿಸಿರುವುದಾಗಿ ತಿಳಿಸಿರುತ್ತಾರೆ.

4. ಪ್ರತಿವಾದಿ-1 ರವರ ಸದರಿ ಆಕ್ಷೇಪಣೆಯಿಂದಾಗಿ ಕಂದಾಯ ನಿರೀಕ್ಷಕರು, ಕಮಲಾಪುರ ಇವರು ಸದರಿ ಪ್ರಕರಣವನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 129 ರಡಿಯಲ್ಲಿ ವಿವಾದಾಸ್ಪದವೆಂದು ಪರಿಗಣಿಸಿ, ತಹಶೀಲ್ದಾರರು ಹೊಸಪೇಟೆ ಇವರಿಗೆ ಸಲ್ಲಿಸಿರುತ್ತಾರೆ. ಪ್ರತಿವಾದಿ-2 ರವರಾದ ತಹಶೀಲ್ದಾರರು, ಹೊಸಪೇಟೆ ಇವರು ವಿಚಾರಣೆ ನಡೆಸಿ ಉಭಯ ಪಕ್ಷದವರು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ತಿಳಿಸಿ ಪ್ರಕರಣವನ್ನು ವಿಲೇಗೊಳಿಸಿರುತ್ತಾರೆಂದು ಕಾರಣ ಸದರಿ ಆದೇಶದಿಂದ ಬಾದಿತಗೊಂಡ ವಾದಿಯು ಸದರಿ ಅಪೀಲನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

5. ಮುಂದುವರೆದು ಅಪೀಲುದಾರರ ಪರ ವಕೀಲರು ತಹಶೀಲ್ದಾರರು, ಅಪೀಲುದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸದೇ ಮಾಡಿರುವ ಆದೇಶವು ಏಕಪಕ್ಷೀಯವಾಗಿರುವುದಾಗಿ ತಿಳಿಸಿರುತ್ತಾರೆ. ಸದರಿ ವ್ಯಾಜ್ಯದ ಜಮೀನನ್ನು ವಾದಿಯ ಗಂಡನು ತನ್ನ ಸ್ವಯಾರ್ಜಿತ ಆದಾಯ ಹಾಗೂ ಉಳಿತಾಯದಿಂದ ನೋಂದಾಯಿತ ಕ್ರಯ ದಸ್ತಾವೇಜು ಸಂಖ್ಯೆ:320/2006-07 ದಿನಾಂಕ:21.04.2006 ರ ಮೂಲಕ ಕ್ರಯಕ್ಕೆ ಪಡೆದಿರುವುದಾಗಿ, ಕಾರಣ ಕಾನೂನು ಪ್ರಕಾರವಾಗಿ ಧರ್ಮಪತ್ನಿಯಾಗಿ ವಾದಿಯು ತನ್ನ ಹೆಸರಿಗೆ ಹಕ್ಕು ಬದಲಾವಣೆ ಮಾಡಿಸಿಕೊಳ್ಳು ಪೂರ್ಣ ಹಕ್ಕು ಹೊಂದಿರುವುದಾಗಿ, ಪ್ರತಿವಾದಿಯ-1 ರವರಿಗೆ ಸದರಿ ಜಮೀನಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲವೆಂದು, ಈಗಾಗಲೇ ಪ್ರತಿವಾದಿ-1 ರವರು ತಮ್ಮ ಗಂಡನ ಹೆಸರಿನಲ್ಲಿ ಹಲವು ಜಮೀನುಗಳನ್ನು ಹೊಂದಿರುವ ಬಗ್ಗೆ ತಿಳಿಸಿರುತ್ತಾರೆ. ಪಟ್ಟಾದಾರ ಮರಣ ಹೊಂದಿದ ನಂತರ ಪೋತಿ ಪ್ರಕಾರ ಅವರ ವಾರಸುದಾರರಿಗೆ ಹಕ್ಕು ಬದಲಾವಣೆ ಮಾಡುವ ಅಧಿಕಾರ ಕಂದಾಯ ಅಧೀಕಾರಿಗಳಿಗೆ ಇರುತ್ತದೆಂದು ಆದರೆ ಪ್ರತಿವಾದಿ-2 ರವರು ಉಭಯ ಪಕ್ಷದವರಿಗೆ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ತಿಳಿಸಿರುವುದು ಕಾನೂನಿಗೆ ವಿರುದ್ದವಾಗಿದೆಯೆಂದು, ತಹಶೀಲ್ದಾರರು, ಹೊಸಪೇಟೆ ಇವರು ಸಂಖ್ಯೆ/ಕಂ/ಪಹಣಿ/ತಕರಾರು/57/2014-15 ದಿನಾಂಕ:13.04.2015 ರ ಮೂಲಕ ಮಾಡಿರುವ ಆದೇಶವನ್ನು ತಳ್ಳಿ ಹಾಕುವಂತೆ, ಹಾಗೂ ಸದರಿ ವ್ಯಾಜ್ಯದ ಜಮೀನನ್ನು ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಮನವಿ ಮಾಡಿಕೊಂಡು ಸದರಿ ಅಪೀಲನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

**ಪ್ರತಿವಾದಿ ಪರ ವಕೀಲರು** ತಮ್ಮ ಲಿಖಿತ ವಾದವನ್ನು ಮಂಡಿಸಿದ್ದು, ಇವರ ಪ್ರಕಾರ ಮೇಲ್ಮನವಿದಾರರು ಹಾಜರುಪಡಿಸಿದ ಅಪೀಲಿನಲ್ಲಿರುವ ಎಲ್ಲಾ ಸಂಗತಿಗಳು ಸತ್ಯಕ್ಕೆ ದೂರವಾದವುಗಳಾಗಿದ್ದು, ಅವುಗಳನ್ನು ರುಜುವಾತು ಪಡಿಸುವ ಜವಾಬ್ದಾರಿಯು ಅಪೀಲುದಾರರ ಮೇಲೆ ಇರುತ್ತದೆಂದು, ಪ್ರತಿವಾದಿ-2 ರವರು ಮಾಡಿರುವ ಆದೇಶವು ಕಾನೂನುಬದ್ಧವಾಗಿರುತ್ತದೆಂದು ತಿಳಿಸಿರುತ್ತಾರೆ.

ಸದರಿ ಜಮೀನನ್ನು ವಾದಿಯ ಗಂಡನ ಹೆಸರಿಗೆ ಕ್ರಯ ನೋಂದಣಿ ಮಾಡಿಸಿಕೊಟ್ಟಿರುವುದಾಗಿ ಹಾಗೂ ವಾದಿಯ ಗಂಡನು ಜಮೀನನ್ನು ಖರೀದಿ ಮಾಡುವ ಸಮಯದಲ್ಲಿ ವ್ಯಾಸಾಂಗ ಮಾಡುತ್ತಿರುವುದಾಗಿ ಮತ್ತು ಸದರಿ ಜಮೀನು ಪ್ರತಿವಾದಿಯ ಹಣದಿಂದ ಖರೀದಿ ಮಾಡಿರುವುದಾಗಿ ಹಾಗೂ ದಿನಾಂಕ:26.03.2008 ರಂದು ವಾದಿಯ ಗಂಡನು ಸದರಿ ಜಮೀನಿನ ಮೇಲೆ ಯಾವುದೇ ರೀತಿಯ ಹಕ್ಕು ಸಂಬಂಧ ಇರುವುದಿಲ್ಲವೆಂದು ಲಿಖಿತವಾಗಿ ಒಪ್ಪಿಗೆ ಕರಾರು ಪತ್ರವನ್ನು ಸಾಕ್ಷಿಗಳ ಸಮಕ್ಷಮದಲ್ಲಿ ಬರೆದುಕೊಟ್ಟಿರುವುದಾಗಿಯು ಹೇಳಿಕೆ ನೀಡಿರುವುದಾಗಿ, ಸದರಿ ವ್ಯಾಜ್ಯದ ಜಮೀನು ಇಂದಿಗೂ ಪ್ರತಿವಾದಿಯ ಸ್ವಾಧೀನಾನುಭವದಲ್ಲಿರುತ್ತದೆಂದು ತಿಳಿಸಿರುತ್ತಾರೆ.

ಮುಂದುವರೆದು, ಹಿಂದೂ ವಾರಸತ್ವ ಅಧಿನಿಯಮದ ಪ್ರಕಾರ ಯಾವುದೇ ದಾಖಲಾತಿ ಮಾಡದೇ ತೀರಿಕೊಂಡ ವ್ಯಕ್ತಿಯ ಹೆಸರಿನಲ್ಲಿರುವ ಆಸ್ತಿಗಳು ಆತನ 1ನೇ ವರ್ಗಕ್ಕೆ ಸೇರಿದ (ಕ್ಲಾಸ್1 ಹೇರ್ಸ್) ವಾರಸುದಾರರು, ಮಕ್ಕಳು, ಹೆಂಡತಿ ಮತ್ತು ತಾಯಿಗೆ ಸಮವಾದ ಹಕ್ಕು ಇರುತ್ತದೆಂದು, ದಿವಂಗತ ಚಂದ್ರಶೇಖರಯ್ಯ ಇವರು ಸರ್ಕಾರಿ ನೌಕರಿಯಲ್ಲಿದ್ದು, ವಾದಿಯು ಮನಗೆ ಭವಿಷ್ಯ ನಿಧಿಯ ಸಂಪೂರ್ಣ ಹಣ ಮತ್ತು ಪಿಂಚಣಿ ಹಾಗೂ ಎಲ್.ಎ.ಸಿ ಹಣ ಬೇಕೆಂದು ಸದರಿ ವ್ಯಾಜ್ಯದ ಜಮೀನನ್ನು ಪ್ರತಿವಾದಿ-1 ರವರಿಗೆ ಬಿಟ್ಟುಕೊಡಲು ಒಪ್ಪಿ ಎಲ್ಲಾ ಸವಲತ್ತುಗಳನ್ನು ಪಡೆದಿರುವುದಾಗಿ, ವಾದಿಯು ಸದರಿ ಜಮೀನು ತನ್ನ ಗಂಡನ ಹೆಸರಿನಲ್ಲಿದ್ದುದರಿಂದ ತನ್ನ ಹೆಸರಿನಲ್ಲಿ ಖಾತಾ ಬದಲಾವಣೆಗೆ ಅರ್ಜಿ ಸಲ್ಲಿಸಿರುವುದಾಗಿ ಈ ಬಗ್ಗೆ ಪ್ರತಿವಾದಿಯು ತಕರಾರು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ವಾದಿ ಮತ್ತು ಪ್ರತಿವಾದಿಗಳ ಹೇಳಿಕೆ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇರೆಗೆ ಹೊಸಪೇಟೆ ತಾಲೂಕು ಕಮಲಾಪುರ ಹೋಬಳಿ ಹಂಪಿ ಗ್ರಾಮದ ಸ.ನಂ.69/2ಎ ವಿಸ್ತೀರ್ಣ: 01 ಎಕರೆ 71 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಸದರಿ ಪ್ರಕರಣವು ಸಿವಿಲ್ ಸ್ವರೂಪದ್ದಾಗಿರುವುದರಿಂದ ಉಭಯ ಪಕ್ಷಗಾರರು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ಕೆಳಕಂಡಂತೆ

**-: ಆದೇಶ :-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ವಜಾಗೊಳಿಸುತ್ತಾ,** ಹೊಸಪೇಟೆ ತಾಲೂಕು ಕಮಲಾಪುರ ಹೋಬಳಿ ಹಂಪಿ ಗ್ರಾಮದ ಸ.ನಂ.69/2ಎ ವಿಸ್ತೀರ್ಣ: 01 ಎಕರೆ 71 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಸದರಿ ಪ್ರಕರಣವು ಸಿವಿಲ್ ಸ್ವರೂಪದ್ದಾಗಿರುವುದರಿಂದ ಉಭಯ ಪಕ್ಷಗಾರರು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:07.04.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ಅವಿನಾಶ ಮೆನನ್ ರಾಜೇಂದ್ರನ್, ಭಾ.ಆ.ಸೇ]
ಸಹಾಯಕ ಆಯುಕ್ತರು,
ಹೊಸಪೇಟೆ

ವಾದಿ : ಪ್ರತಿವಾದಿಗಳಿಗೆ

**ಪ್ರತಿಯನ್ನು**:- ತಹಶೀಲ್ದಾರರು, ಹೊಸಪೇಟೆ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

20/8/16